# ವಿಶಿ



## ಚೆಸ್ ಲೋಕದ ಚಿರಯುವಕ

■ ಗಿರೀಶ ದೊಡ್ಡಮನಿ

**ಕ**ಳೆದ 30 ವರ್ಷಗಳಿಂದ ಚದುರಂಗ ಲೋಕದಲ್ಲಿ ರಾರಾಜಿಸುತ್ತಿರುವ 'ವಿಶಿ' ಈಗ ಮತ್ತೆ ಸುದ್ದಿಯಲ್ಲಿದ್ದಾರೆ. ಈ ಬಾರಿ ಅವರು ರ್‍ಯಾಪಿಡ್ ಚೆಸ್ ವಿಭಾಗದ ವಿಶ್ವ ಕಿರೀಟ ಧರಿಸಿದ್ದಾರೆ. ಅಲ್ಲದೇ ಮಿಂಚಿನ ವೇಗದ ಆಟ ಬ್ಲಿಟ್ಜ್ ಮಾದರಿಯಲ್ಲಿಯೂ ಕಂಚಿನ ಪದಕ ಪಡೆದು ಮಿಂಚಿದ್ದಾರೆ.

ಹೋದ ವಾರ ಸೌದಿ ಆರೇಬಿಯಾದ ರಿಯಾದ್‌ನಲ್ಲಿ ನಡೆದಿದ್ದ ಟೂರ್ನಿಯಲ್ಲಿ (ಹೋದ ಡಿಸೆಂಬರ್ 11ರಂದು 48ನೇ ವಸಂತಕ್ಕೆ ಕಾಲಿರಿಸಿದ ಹತ್ತು ದಿನಗಳ ನಂತರ) ಅವರು ಈ ಸಾಧನೆ ಮಾಡಿದ್ದು ವಿಶೇಷ. ಇದರೊಂದಿಗೆ ಚೆಸ್ ಕ್ರೀಡೆಯ ಮೂರು ಮಾದರಿಗಳಿಗೂ ತಾವು ಸೈ ಎಂದು ಸಾಬೀತು ಮಾಡಿದರು.

ಕ್ಲಾಸಿಕಲ್ ಚೆಸ್ ಮಾದರಿಯಲ್ಲಿ ಏಳು ಬಾರಿ ಚಾಂಪಿಯನ್ ಪಟ್ಟ ಅಲಂಕರಿಸಿದ ಸಾಧನೆ ಆನಂದ ಅವರದ್ದು. ರ್‍ಯಾಪಿಡ್ ಚೆಸ್‌ನಲ್ಲಿ ಅವರು ಚಿನ್ನದ ಪದಕ ಗೆದ್ದಿರುವುದು ಇದು ಎರಡನೇ ಬಾರಿ. 2003ರಲ್ಲಿ ಅವರು ಈ ಮಾದರಿಯಲ್ಲಿ ಮೊದಲ ಸಲ ಗೆದ್ದಿದ್ದರು. 15 ವರ್ಷಗಳ ನಂತರವೂ ಅವರ ಉತ್ಸಾಹ, ಛಲ ಮತ್ತು ಕಲಿಕೆಯ ಹಸಿವು ಮುಗಿದಿಲ್ಲ ಎಂಬುದನ್ನು ಚಿನ್ನ ಗೆಲ್ಲುವ ಮೂಲಕ ತೋರಿಸಿದ್ದಾರೆ.

'ರ್‍ಯಾಪಿಡ್ ಮತ್ತು ಬ್ಲಿಟ್ಜ್ ಚೆಸ್‌ಗಳ ಕಂಪ್ಯೂಟರ್ ತಂತ್ರಾಂಶಗಳ ಮೂಲಕ ಅಭ್ಯಾಸ ಮಾಡಿದ್ದು ಲಾಭ ನೀಡಿತು. ಚಾಣಾಕ್ಷ ನಡೆಗಳ ಜೊತೆಗೆ ವೇಗವೂ ಇಲ್ಲಿ ಮುಖ್ಯ' ಎಂದು ವಿಶಿ ಹೇಳುತ್ತಾರೆ.

ರ್‍ಯಾಪಿಡ್ ಚೆಸ್‌ನ ಒಂದು ಪಂದ್ಯವು 25 ನಿಮಿಷಗಳಿಗೆ ನಿಗದಿಯಾಗಿರುತ್ತದೆ. ಬ್ಲಿಟ್ಜ್ ಮಾದರಿಯ ಪಂದ್ಯ ಕೇವಲ ಮೂರು ನಿಮಿಷಗಳದ್ದಾಗಿರುತ್ತದೆ. ಇಲ್ಲಿ ವೇಗದ ಚಲನೆ ಮುಖ್ಯ. ಈ ಮಾದರಿಗಳಲ್ಲಿ ಯಾರು ಹೆಚ್ಚು ಬಾರಿ ಕಾಯಿಗಳನ್ನು ಚಾಲನೆ ಮಾಡುತ್ತಾರೋ ಅವರಿಗೆ ಗೆಲುವು ಒಲಿಯುವ ಸಾಧ್ಯತೆ ಹೆಚ್ಚಿರುತ್ತದೆ. ಕ್ಷಣಕ್ಷಣವೂ ರೋಚಕ ರಸದೌತಣ ನೀಡುವ ಮಾದರಿಯಿದು. ಇತ್ತೀಚಿನ ದಿನಗಳಲ್ಲಿ ಯುವ ಆಟಗಾರರು ಈ ಮಾದರಿಯಲ್ಲಿ ಹೆಚ್ಚು ಭಾಗವಹಿಸುತ್ತಿದ್ದಾರೆ.

ರಿಯಾದ್‌ನ ಟೂರ್ನಿಯ ಫೈನಲ್ ಸುತ್ತಿನ ಟೈ ಬ್ರೇಕರ್‌ನಲ್ಲಿ ಆನಂದ್ 2–0ಯಲ್ಲಿ ರಷ್ಯಾದ ವ್ಲಾದಿಮಿರ್ ಫೆಡೊಸೀವ್ ಅವರನ್ನು ಪರಾಭವಗೊಳಿಸಿದರು. ಅದರ ಮುನ್ನಾ ದಿನ ನಡೆದಿದ್ದ ಒಂಬತ್ತನೇ ಸುತ್ತಿನ ಹಣಾಹಣಿಯಲ್ಲಿ ವಿಶ್ವ ಚಾಂಪಿಯನ್ ಆಟಗಾರ. ನಾರ್ವೆಯ ಮ್ಯಾಗ್ನಸ್ ಕಾರ್ಲ್‌ಸನ್ ವಿರುದ್ಧ ಗೆದ್ದಿದ್ದರು. ಇಡೀ ಟೂರ್ನಿಯಲ್ಲಿ ಆನಂದ ಸೋತಿದ್ದು ಒಂದು ಪಂದ್ಯದಲ್ಲಿ ಅದೂ ಬ್ಲಿಟ್ಜ್ ಸುತ್ತಿನಲ್ಲಿ. ಇದು ಅವರ ಅನುಭವದ ಆಟಕ್ಕೆ ಹಿಡಿದ ಕೈಗನ್ನಡಿ.

'ನಾನು ಈ ಟೂರ್ನಿಯಲ್ಲಿ ಭಾಗವಹಿಸಲು ಪತ್ನಿ ಅರುಣಾ ಒತ್ತಾಯವೇ ಕಾರಣ. ಆದ್ದರಿಂದ ನನ್ನ ಸಾಧನೆಯ ಶ್ರೇಯವೂ ಆಕೆಗೆ ಸಲ್ಲಬೇಕು' ಎಂದು ಆನಂದ್ ಈಚೆಗೆ ಕ್ರೀಡಾ ವೆಬ್‌ಸೈಟ್‌ನ ಸಂದರ್ಶನದಲ್ಲಿ ಹೇಳಿದ್ದರು.

40 ವರ್ಷ ವಯಸ್ಸು ಮೀರಿದರೂ ಟೆನಿಸ್ ಅಂಗಳದಲ್ಲಿ ಸಾಧನೆ ಮೆರೆಯುತ್ತಿರುವ ರೋಜರ್ ಫೆಡರರ್ ಅವರಂತೆ ದೇಹ ಮತ್ತು ಮನಸ್ಸುಗಳ ಫಿಟ್‌ನೆಸ್ ಕಾಯ್ದುಕೊಂಡು ಸಾಧನೆಯ ಹಾದಿಯಲ್ಲಿ ಮುನ್ನುಗ್ಗುತ್ತಿದ್ದಾರೆ.